statement on the floor of this House that the Government is ready to fill up the gap of the deficit for the expenses of the College and the Society, In this connection, I wish to bring to the notice of the Hon'ble members that except the hospital facility, that too to the extent of 80%, the Government is not spending even a single paisa for the management of the Medical College, Belgaum. Hon'ble member Sri K. Puttaswamy, the then Minister for Heal h had visited our College and was kind enough to appreciate the development.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹುಡುಗಾಟವಾಗಿದೆ.

ಶ್ರೀ ಎಸ್. ಪಿ ಪಾಟೀಲ್.—ಹುಡುಗಾಟ ಅಲ್ಲ ಸ್ವಾಮಿ, ನಮ್ಮ ಎದೆ ಕೊರೆಯುತ್ತಾ ಈದೆ. ನೀವು ಮುಪ್ಪಿನ ವಯಸ್ಸಿನಲ್ಲಿದ್ದೀರಿ. ಒಳ್ಳೆಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಿ, ಇಲ್ಲದೇ ಹೋದರೆ ರಾಜಕೀಯದಿಂದ ಹೊರಗೆ ಹೋಗಿ.

SRI H. M. CHANNABASAPPA.—I would like to assure the Hon'ble members that only good and good things alone would be done.

(ii) re : Instructions of the Government of India to the use of English and Hindi in Central Government Undertaking.

SRI B. V. KAKKILAYA (Bantwal).—I call the attention of the Minister for Excise and Development of Kannada to the instructions of the Government of India regarding the use of only English and Hindi in Central Government Undertakings.

ಶ್ರೀಮತಿ ಇ. ಇ. ವಾಜ್ (ಅಬಕಾರಿ ಹಾಗೂ ಕನ್ನಡ ಅಭಿವೃದ್ಧಿ ಶಾಖೆಗಳ ಮಂತ್ರಿಗಳು) —

ಮಾನ್ಯ ಅಧ್ಯಕ್ಷೆಣಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಬಿ. ವಿ. ಕಕ್ಕಿಲಾಯ ಮತ್ತು ಶ್ರೀ ಎಂ ಎಸ್. ಕೃಷ್ಣನ್‌ರವರು ಗಮನ ಸೆಳೆಯುವ ಸೂಚನೆಯನ್ನು ಆಂಗ್ಲ ಭಾಷೆಯಲ್ಲಿ ಕಳುಹಿಸಿದ್ದಾರೆ ಆದುದರಿಂದ ಹೇಳಿಕೆಯನ್ನು ಆಂಗ್ಲ ಭಾಷೆಯಲ್ಲಿಯೇ ಮಾಡಿದ್ದೇನೆ. ಈ ಗಮನ ಸೆಳೆಯುವ ಸೂಚನೆ ಕನ್ನಡ ಭಾಷೆಯ ಬಳಕೆಗೆ ಸಂಬಂಧಪಟ್ಟುದರಿಂದ ಅದನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ಈ ಹೇಳಿಕೆಯನ್ನು ಮಾಡಲು ತಮ್ಮ ಒಪ್ಪಿಗೆಯನ್ನು ಕೇಳುತ್ತಾ ಇದ್ದೇನೆ.

ಭಾರತ ಸರ್ಕಾರದವರು ಗೊತ್ತುಪಡಿಸಿದ ನೀತಿ ನಿಯಮಗಳಿಗನುಸಾರ ರಾಜ್ಯದಲ್ಲಿರುವಂಥ ಕೇಂದ್ರ ಸರ್ಕಾರದ ಕಚೇರಿಗಳು ಮತ್ತು ಉದ್ಯಮ ಸಂಸ್ಥೆಗಳಲ್ಲಿ ಬಳಸಲಾಗುವ ನಾಮ ಫಲಕಗಳನ್ನು ಈ ಮುಂದಿನ ಕ್ರಮದಲ್ಲಿ ಬರೆಯಬೇಕಾಗಿರುತ್ತದೆ.—

1. ಹಿಂದಿ
2. ಇಂಗ್ಲೀಷು ಮತ್ತು
3 ಪ್ರಾದೇಶಿಕ ಭಾಷೆ.

2. ಭಾರತ ಸರ್ಕಾರದ ಒಳಾಡಳಿತ ಇಲಾಖೆಯ ರಾಜ ಭಾಷೆಯ ವಿಭಾಗವು ಎಲ್ಲ ರಾಜ್ಯ ಸರ್ಕಾರಗಳಿಗೆ ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಕಳಿಸಿದ ಸುತ್ತೋಲೆ ಕ್ರಮಾಂಕ 22, ದಿನಾಂಕ 17-12-1976ರ ಮೇರೆಗೆ ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯ ಸರ್ಕಾರಗಳ ನಡುವೆ ಪತ್ರವ್ಯವಹಾರ ನಡೆಸುವಾಗ ಅನುಸರಿಸತಕ್ಕ ಕಾರ್ಯವಿಧಾನವನ್ನು ಸ್ಪಷ್ಟಪಡಿಸಿದೆ. ಭಾರತ ಸರ್ಕಾರವು ಈ ಸುತ್ತೋಲೆಯನ್ನು ರಾಜ ಭಾಷಾ ಅಧಿನಿಯಮ 1963 ಮತ್ತು ರಾಜ ಭಾಷಾ (ಒಕ್ಕೂಟ ಸರ್ಕಾರದ ಉದ್ದೇಶಗಳಿಗಾಗಿ ಬಳಕೆ) ನಿಯಮಾವಳಿ 1976—ಇವೆರಡರ ಉಪಬಂಧಗಳಿಗೆ ಅನುಸಾರವಾಗಿ ಹೊರಡಿಸಿದೆ.

3. ರಾಜ್ಯ ಸರ್ಕಾರದವರು ಭಾರತ ಸರ್ಕಾರದ ಒಳಾಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ಬರೆದ 16 ಮೇ, 1977ರ ಪತ್ರದಲ್ಲಿ ಈ ರಾಜ್ಯದೊಳಗೆ ಇರುವ ಎಲ್ಲ ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಮತ್ತು ಸರ್ಕಾರಿ ಉದ್ಯಮ ಸಂಸ್ಥೆಗಳಲ್ಲಿ ನಾಮಫಲಕಗಳನ್ನು ಇಂಗ್ಲಿಷ್ ಹಿಂದಿ ಮತ್ತು ಕನ್ನಡದಲ್ಲಿ ಬರೆಸಲು, ಸೂಚನೆ ನೀಡುವಂತೆ ವಿನಂತಿಸಿಕೊಂಡಿದ್ದರು. ಇದಲ್ಲದೆ ಅದೇ ಪತ್ರದಲ್ಲಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಉದ್ಯಮ ಸಂಸ್ಥೆಗಳಲ್ಲಿ ಕನ್ನಡದಲ್ಲಿ ಬಂದ ಎಲ್ಲ ಪತ್ರಗಳು ಮಾನವಿಗಳೇ ಮುಂತಾದವುಗಳಿಗೆ ಕನ್ನಡದಲ್ಲಿಯೇ ಉತ್ತರಗಳನ್ನು ಕೊಡುವ ವ್ಯವಸ್ಥೆಯಾಗಬೇಕೆಂದು ಕೇಂದ್ರ ಸರ್ಕಾರವನ್ನು ವಿನಂತಿಸಿಕೊಂಡಿದ್ದಾರೆ.

4. ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಬೆಂಗಳೂರು ಅವರು ತಮ್ಮ ಕೆಲವು ಪತ್ರ ವ್ಯವಹಾರಗಳನ್ನು ಕನ್ನಡದಲ್ಲಿ ನಡೆಸಲಾಗುತ್ತಿದೆಯೆಂದು ಕನ್ನಡವನ್ನು ತಮ್ಮ ಉದ್ಯಮ ಸಂಸ್ಥೆಯ ಆಡಳಿತದಲ್ಲಿ ಬಳಕೆ ಮಾಡಲು ಎಲ್ಲ ಕ್ರಮಗಳನ್ನು ಕೈಕೊಳ್ಳುವುದಾಗಿಯೂ ರಾಜ್ಯ ಸರ್ಕಾರಕ್ಕೆ ತಿಳಿಸಿದ್ದಾರೆ.

5. ರಾಜ್ಯ ಸರ್ಕಾರವು ಮುನಿಸಿಪಾರ್ಡರ್ ನಮೂನೆಗಳು, ಟೆಲಿಫೋನ್ ಡೈರೆಕ್ಟರಿ ಮೊದಲಾದ ದಫ್ತರಗಳನ್ನು ಪ್ರಾದೇಶಿಕ ಭಾಷೆ ಅಂದರೆ ಕನ್ನಡದಲ್ಲಿ ಮುದ್ರಿಸಬೇಕೆಂದು ಕೋರಿ ಅಂಚೆ ಮತ್ತು ತಂತಿ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಸಿದೆ. ಪೋಸ್ಟ್‌ಮಾಸ್ಟರ್ ಜನರಲ್ ಅವರು ಮುನಿಸಿಪಾರ್ಡರು ನಮೂನೆಗಳನ್ನು ಕನ್ನಡದಲ್ಲಿ ಮುದ್ರಿಸುವುದಾಗಿ ಭರವಸೆ ಕೊಟ್ಟಿದ್ದಾರೆ.

6. ರಾಜ್ಯ ಸರ್ಕಾರದವರು ಸ್ವೇಷನ್ ಮ್ಯಾನೇಜರ್ ಇಂಡಿಯನ್ ಏರ್‌ಲೈನ್ಸ್, ಬೆಂಗಳೂರು ಇವರಿಗೆ ಪತ್ರ ಬರೆದು ವಿಮಾನಗಳ ಆಗಮನ ಮತ್ತು ನಿರ್ಗಮನಗಳನ್ನು ಕನ್ನಡದಲ್ಲಿಯೂ ಪ್ರಸಾರ ಮಾಡುವಂತೆ ವಿನಂತಿಸಿಕೊಂಡಿದ್ದಾರೆ.

7. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಂಥ ಕೆಲವು ಅಖಿಲ ಭಾರತ ಸಂಸ್ಥೆಗಳು ಬೆಂಗಳೂರು ಹಾಗೂ ಕರ್ನಾಟಕದ ಇತರ ಪ್ರದೇಶಗಳಲ್ಲಿರುವ ತಮ್ಮ ಶಾಖಾ ಕಚೇರಿಗಳಿಗೆ ಕೆಲವು ವಿಷಯುಗಳಲ್ಲಿ ಕನ್ನಡವನ್ನು ಬಳಸುವಂತೆ ಈಗಾಗಲೇ ನಿದೇಶನ ಕೊಟ್ಟಿವೆ. ಇದಲ್ಲದೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅವರು ಬೆಂಗಳೂರಿನಲ್ಲಿರುವ ತಮ್ಮ ವಿಭಾಗ ಕಚೇರಿಯಲ್ಲಿ ನಮೂನೆಗಳು ಚೆಕ್ ಪುಸ್ತಕಗಳು ಪಾಸು ಪುಸ್ತಕಗಳನ್ನು ಕನ್ನಡದಲ್ಲಿ ಭಾಷಾಂತರ ಮಾಡಲು ಒಂದು ಭಾಷಾಂತರ ವಿಭಾಗವನ್ನು ಪ್ರಾರಂಭಿಸಿರುತ್ತಾರೆ. ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯವು ಬ್ಯಾಂಕಿನ ಭಾಷಾಂತರ ವಿಭಾಗದ ಅಧಿಕಾರಿಗೆ ಅವಶ್ಯ ಸಾಹಿತ್ಯವನ್ನು ಕನ್ನಡದಲ್ಲಿ ಭಾಷಾಂತರ ಮಾಡಲು ಅಗತ್ಯವಾದ ಸಹಾಯ ಮತ್ತು ಮಾರ್ಗದರ್ಶನವನ್ನು ನೀಡಿದೆ.

8. ಕೇಂದ್ರ ಸರ್ಕಾರದವರು ಬೆಂಗಳೂರಿನಲ್ಲಿರುವ ಕಾರ್ಖಾನೆಗಳಿಗೆ ಕಚೇರಿ ಪತ್ರ ವ್ಯವಹಾರ ಮುಂತಾದವುಗಳಲ್ಲಿ ಇಂಗ್ಲಿಷ್ ಮತ್ತು ಹಿಂದಿಯನ್ನು ಬಳಸುವಂತೆ ನೀಡಿದೆಯೆಂಬ ಸುತ್ತೋಲೆಯ ವಿಚಾರ ರಾಜ್ಯ ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ವಿಚಾರವಾಗಿ ನಾವು ಕೇಂದ್ರ ಸರ್ಕಾರದೊಡನೆ ಪತ್ರವ್ಯವಹಾರ ನಡೆಸುತ್ತೇವೆ.

9. ರಾಜ್ಯ ಸರ್ಕಾರದವರು ಕನ್ನಡದ ಅಭಿವೃದ್ಧಿಗಾಗಿ ಮತ್ತು ರಾಜ್ಯದಲ್ಲಿರುವ ವಿವಿಧ ಸಂಸ್ಥೆಗಳಲ್ಲಿ ಕನ್ನಡವನ್ನು ಬಳಕೆಗೆ ತರಲು ಎಲ್ಲ ಕ್ರಮಗಳನ್ನು ಕೈಕೊಳ್ಳುತ್ತಿದ್ದಾರೆ.

ಶ್ರೀ ಬಿ ಎ. ಕಕ್ಕಿರಾಯ.—ಪ್ರಜಾವಾಣಿ ಪತ್ರಿಕೆಯಲ್ಲಿ ಇತ್ತೀಚೆಗೆ ಒಂದು ಸುದ್ದಿ ಬಂದ ಬಗ್ಗೆ ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ ಸಚಿವರ ಹೇಳಿಕೆಯ 1 ರಿಂದ 7ರ ತನಕ ತಿಳಿಸಿರುವಂತೆ 15-11-1976ರ ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಕನ್ನಡದ ಬಳಕೆಗಾಗಿ ಕೇಂದ್ರ ಸರ್ಕಾರ ಮತ್ತು ಇತರ ಕಛೇರಿಗಳಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡಿದ್ದೀರಿ. ಆದರೆ 8 ಮತ್ತು 9ನೇ ಉತ್ತರಗಳು ಬಹಳ ಮುಖ್ಯವಾದುವು. ಇತ್ತೀಚೆಗೆ ಬಂದಿರುವ ಒಂದು ಸುತ್ತೋಲೆ ಇನ್ನೂ ತಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತೀರಿ. ಅದು ನಿಜವಾಗಿ ನಿಮ್ಮ ಗಮನಕ್ಕೆ ಬಂದಿದೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ನೌಕರರ ಗಮನಕ್ಕೆ ಈ ಸುತ್ತೋಲೆ ಬಂದಿದೆ. ಅವರು ಯಾವುದೇ ಅರ್ಜಿ ಕೊಡಬೇಕಾಗಿದ್ದರೆ ಹಿಂದಿ ಅಥವಾ

ಇಂಗ್ಲೀಷ್‌ನಲ್ಲಿಯೇ ಕೊಡಬೇಕು. ಅಲ್ಲಿನ ನೌಕರರ ಮೇಲೆ ಏನಾದರೂ ಚಾರ್ಜ್‌ಷೀಟ್ ಹಾಕಿದರೂ ಕೂಡ ಅವರು ಕನ್ನಡದಲ್ಲಿ ಉತ್ತರ ಬರೆಯುವ ಹಾಗೆ ಇಲ್ಲ. ಕನ್ನಡದಲ್ಲಿ ಬರೆಯಬೇಕೆಂದು ಕೇಳುವ ಹಾಗೆಯೂ ಇಲ್ಲ. ನನಗೆ ಗೊತ್ತಿರುವ ಹಾಗೆ ಅಲ್ಲಿ ಕೆಲಸದಲ್ಲಿರುವವರ ಮೇಲಾಗಲೀ ಅಥವಾ ಕೆಲಸ ಬಿಡುವವರ ಮೇಲಾಗಲೀ ಏನೇ ಕ್ರಮ ನಡೆದರೂ ಕೂಡ ಕನ್ನಡದಲ್ಲಿ ನಡೆಯುವ ಹಾಗೆ ಇಲ್ಲ. ಇದರಿಂದ ಕೆಲಸಗಾರರಿಗೆ ಬಹಳ ತೊಂದರೆಯಾಗಿದೆ ಇದರ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಪತ್ರ ವ್ಯವಹಾರ ನಡೆಸಿದ್ದೇವೆಂದು ಈಗ ಹೇಳುತ್ತಿದ್ದೀರಿ. ಅದಕ್ಕೇನಾದರೂ ಕೇಂದ್ರ ಸರ್ಕಾರದಿಂದ ಉತ್ತರ ಬಂದಿದೆಯೇ ಎಂಬುದನ್ನು ತಿಳಿಸಬೇಕು. ಆದರೆ ಅಲ್ಲಿ ಎಲ್ಲ ತರಹದ ವ್ಯವಹಾರಗಳನ್ನು ಇಂಗ್ಲೀಷ್ ಮತ್ತು ಹಿಂದಿ ಗೊತ್ತಿರುವವರೇ ಮಾಡಬೇಕಾಗುತ್ತದೆ. ಆದರೆ ಈ ಎರಡು ಭಾಷೆಗಳು ತಿಳಿಯದೇ ಇರತಕ್ಕ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ನೂಕ್ತ ಕ್ರಮ ತೆಗೆದುಕೊಳ್ಳಲು ಒಂದು ಹೊಸ ಸೂತ್ರವನ್ನು ಹೊರಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಈಗಾಗಲೇ ಪತ್ರ ವ್ಯವಹಾರ ನಡೆಸಿದ್ದೇವೆ. ಆದರೆ ಅದಕ್ಕೆ ಇದುವರೆಗೂ ಉತ್ತರ ಬಂದಿಲ್ಲ. ನೌಕರರು ಕನ್ನಡದಲ್ಲಿ ಅರ್ಜಿ ಕೊಟ್ಟರೆ ಅಲ್ಲಿ ಸ್ವೀಕರಿಸುವುದಿಲ್ಲವೆಂದು ಮಾನ್ಯ ಸದಸ್ಯರು ಈಗ ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಪೂರ್ತಿ ಗಮನ ಕೊಟ್ಟು ಸೂಕ್ತ ಕ್ರಮ ಯಾವ ರೀತಿ ತೆಗೆದುಕೊಳ್ಳಬೇಕೋ ಆ ರೀತಿಯಾಗಿ ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.— ಸೆಕ್ಷನ್ 312ರ ಪ್ರಕಾರ ನಾನು ನಿನ್ನೆ ಒಂದು ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.—ನಾನೇ ಅದನ್ನು ಇನ್ನೂ ನೋಡಿಲ್ಲ. ನಾಳೆ ನೋಡೋಣ.

ಶ್ರೀ ಕೆ. ಎಚ್.—ಹನುಮೇಗೌಡ.—ಪೆಟರ್‌ನರಿ ಕಾಲೇಜಿನ 30 ಹುಡುಗರು ಉಪವಾಸ ಕುಳಿತು ಅವರ ಪೈಕಿ 2 ಹುಡುಗರು ಈಗಾಗಲೇ ಸಾಯುವ ಸ್ಥಿತಿಯಲ್ಲಿದ್ದಾರೆಂಬ ವರ್ತಮಾನ ನನಗೆ ಈಗ ಬಂದಿದೆ. ಆ ಹುಡುಗರ ಗತಿ ಏನು? ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈಗ ಇಲ್ಲಿಯೇ ಇದ್ದಾರೆ. ಆದ್ದರಿಂದ ಅವರ ಬಗ್ಗೆ ಈಗ ತಕ್ಷಣ ಏನಾದರೂ ವ್ಯವಸ್ಥೆ ಮಾಡದಿದ್ದರೆ ಆ ಹುಡುಗರೂ ಸಹ ತೀರಿ ಹೋಗುತ್ತಾರೆ.

ಶ್ರೀ ಬಿ. ವಿ. ಕಕ್ಕೇರಾಯ.—ಇಂದೂ ಕೂಡ ಇನ್ನು 2–3 ಹುಡುಗರು ಅಂತಹ ಸ್ಥಿತಿಯಲ್ಲಿಯೇ ಇದ್ದಾರೆ.

ಶ್ರೀ ಬಿ. ಜಿ. ಬಣಕಾರ್.—ಮಾನ್ಯ ಮುಖ್ಯಮಂತ್ರಿಗಳೇ ಮೊನ್ನೆ ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ನಾನೂ ಕೂಡ ಹೇಳಿದ್ದೇನೆ. ಆದರೆ ಈ ರೀತಿ ಮುಷ್ಕರ ಹೂಡಬೇಡಿ we are at it ಎಂದು ಹೇಳಿದ್ದೇವೆ. Now we are at it. ಮುಷ್ಕರ ಹೂಡಬೇಡಿ, ಅದನ್ನು ಬಿಟ್ಟುಬಿಡಿ ಎಂದು ಹೇಳಿದ್ದೇವೆ. ಆದ್ದರಿಂದ ತಾವು ಮಾನ್ಯ ಸದಸ್ಯರಿಗೆ ಈ ವಿಚಾರವಾಗಿ ಸ್ವಲ್ಪ ಹೇಳಿ.

ಶ್ರೀ ಕೆ. ಎಚ್. ಹನುಮೇಗೌಡ.—ಸಂಬಂಧಪಟ್ಟ ಮಂತ್ರಿಗಳು ಇಲ್ಲಿಂದ ಯಾರನ್ನಾದರೂ ಅಲ್ಲಿಗೆ ಕಳುಹಿಸಿ ಅವರಿಗೆ ಹೇಳಬೇಕು.

ಶ್ರೀ ಬಿ. ಜಿ. ಬಣಕಾರ್.—ನಾವು ನೀವು ಇಬ್ಬರೂ ಹೋಗೋಣ

ಅಧ್ಯಕ್ಷರು.—ಈಗಲೇ ಅವರನ್ನು ಕರೆದುಕೊಂಡು ಹೋಗಿ.

Thirty first Report o the Committee on Private Members Bills and Resolutions

PRESENTATION

SRI G POTTASWAMY (Deputy Speaker).—I present—"The 31st Report of the Committee on Private Members Bills and Resolutions."